ಕರ್ನಾಟಕ ವಿಧಾನ ಸಭೆ

ಗುರುವಾರ, 9ನೇ ಫೆಬ್ರುವರಿ ತಿಂಗಳು 1984

ವಿಧಾನ ಸೌಧದ ವಿಧಾನ ಸಭೆಯ ಸಭಾಂಗಣದಲ್ಲಿ ಸದನವು ಬೆಳಿಗ್ಗೆ 11 ಘಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ಡಿ. ಬಿ. **ಚಂದ್ರೇಗೌಡ**) ಅವರು ಪೀಠವನ್ನು ಅಲಂಕರಿಸಿದರು.

1. ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು.

Sub : Appointment of Judges in the State

Question : 222 (192) Mallikarjuna V. Banni (Guledgud).— Will the Minister for Law and Parliamentary Affairs and Housing be pleased to state that :

a) Whether it is not a fact that there is a provision for appointment of Law graduates directly as Judges after serving few years in Courts ;

b) Whether provision has been made for direct appointment of Sales Tax Consultants who have served for many years in Commercial Tax Department as Assistant Commercial Tax Officer or Commercial Tax Officer in the same Department ;

c) If not, whether there is any proposal before the Government to amend the existing Rules suitably ?

Answer : Sri A Lakshmisagar (Minister for Law and Parliamentary Affairs and Housing).— a) No. b) No.

c) Does not arise.

ಶ್ರೀ **ಮಲ್ಲಿಕಾರ್ಜುನ** ವಿ. ಬನ್ನಿ.— ಕಾನೂನು ಪದವೀಧರರಾಗಿ ಕೋರ್ಟಿನಲ್ಲಿ ಕೆಲವು ವರ್ಷ ಸರ್ವಿಸ್ ಮಾಡಿ, ವಕೀಲಿ ವೃತ್ತಿ ಮಾಡಿದಂಥಾವರನ್ನು ಕೋರ್ಟಿನಲ್ಲಿ ನ್ಯಾಯಾಧೀಶರನ್ನಾಗಿ ನೇಮಿಸುತ್ತೀರಾ? ಅವರಿಗೆ ನೇರ ನೇಮಕಾತಿ ಇದೆ. ಇದೇರೀತಿ ವಾಣಿಜ್ಯ ಇಲಾಖೆಯಲ್ಲೂ ಕೂಡ ಸೇಲ್ಸ್ ಟ್ಯಾಕ್ಸ್ ಪ್ರಾಕ್ಟೀಷನರ್ ಆಗಿ ಕೆಲಸ ಮಾಡುವವರಿಗೂ ಸಹ ಈ ಸೌಲಭ್ಯ ಇದೆ, ಹೀಗಿರುವಾಗ ಗುಮಾಸ್ತರ ಹುದ್ದೆಯಲ್ಲಿರುವವರಿಗೆ ಏಕಕ್ಕೆ ಅವಕಾಶ ಕೊಡುವುದಿಲ್ಲ?

ಶ್ರೀ **ಎ. ಲಕ್ಷ್ಮೀಸಾಗರ್** — ಕೋರ್ಟಿನಲ್ಲಿ ಗುಮಾಸ್ತರ ಕೆಲಸದಲ್ಲಿದ್ದರೂ ಕೂಡ ಕಾನೂನು ಪದವೀಧರರಾಗಿದ್ದು ಒಂದೆರಡು ಸಹ ಮುನ್ಸೀಫ್ ಪರೀಕ್ಷೆಗೆ ಕೂತು ಅದರಲ್ಲಿ ತೇರ್ಗಡೆ ಆಗಿದ್ದರೆ ಮುನ್ಸೀಫ್ ಮ್ಯಾಜಿಸ್ಟ್ರೇಟರ್ ಹುದ್ದೆಗಳು ಸಿಕ್ಕಿರುವ ಒಂದೆರಡು ಉದಾಹರಣೆಗಳು ಇವೆ. ನಿಯಮಾವಳಿಗಳ ಪ್ರಕಾರ ಅಡ್ವೋಕೇಟ್ಸ್ ಆಗ ಎನ್‌ರೋಲ್ ಆಗಿದ್ದರೆ ಮಾತ್ರ ಮುನ್ಸಿಫ್ ಪರೀಕ್ಷೆಗೆ ಕೂತು ಕೊಳ್ಳುವ ಅವಕಾಶ ಈಗಲೂ ಇದೆ.

ಎರಡನೆಯದಾಗಿ ಹೇಳಬೇಕಾದರೆ ಸೇಲ್ಸ್ ಟ್ಯಾಕ್ಸ್ ಪ್ರಾಕ್ಟೀಷನರ್ಸ್, ಆಗಲಿ ಅಥವಾ ಇನ್‌ಕಂ ಟ್ಯಾಕ್ಸ್ ಪ್ರಾಕ್ಟೀಷನರ್ಸ್ ಆಗಲಿ ವಕೀಲಿ ವೃತ್ತಿಯನ್ನು ಪ್ರಾಕ್ಟೀಸ್ ಮಾಡುವುದಕ್ಕೆ ಅವಕಾಶ ಇದೆ. ಆದರೆ ಅವರು ಜಡ್ಜ್ ಆಗುವುದಕ್ಕೆ ಅವಕಾಶ ಇಲ್ಲ. ಅವರು ಬೇಕಾದರೆ ಪ್ರಾಕ್ಟೀಸ್ ಮಾಡಬಹುದು. ಸಿವಿಲ್ ಪ್ರೊಸೀಜರ್ ಕೋಡ್ ಪ್ರಕಾರ ಸಾಮಾನ್ಯ ಜನರೂ ಕೂಡ ಈ ಒಂದು ಪರವಾನಗಿ ತೆಗೆದುಕೊಂಡು ವಕೀಲಿ ವಹಿಸುವುದಕ್ಕೆ ಅವಕಾಶ ಇದೆ. ಹಾಗೆಯೇ ಸಿವಿಲ್ ಪ್ರೊಸೀಜರ್ ಕೋಡ್ ಪ್ರಕಾರ ಮುನ್ಸೀಫ್ ಮ್ಯಾಜಿಸ್ಟ್ರೇಟರಿಗೆ ವಕೀಲಿ ವೃತ್ತಿ ಆಗಿರಬೇಕು ಅನ್ನುವ ಕಾನೂನು ಇರುವುದರಿಂದ, ಸೇಲ್ಸ್ ಟ್ಯಾಕ್ಸ್ ಪ್ರಾಕ್ಟೀಷನರಾಗಲಿ ಅಥವಾ ಇನ್‌ಕಂಟ್ಯಾಕ್ಸ್ ಪ್ರಾಕ್ಟೀಷನರಾಗಲಿ ಎರಡನ್ನೂ ಪ್ರಾಕ್ಟೀಸ್ ಮಾಡುತ್ತಾ ಇದ್ದರೂ ಕೂಡ ಅವರು ನ್ಯಾಯಾಧೀಶರಾಗುವುದಕ್ಕೆ ಸಾಧ್ಯವಿಲ್ಲ,

ಶ್ರೀ ಮಲ್ಲಿಕಾರ್ಜುನ ವಿ. ಬನ್ನಿ.— ನಾನು ಕೇಳುತ್ತಾ ಇರುವುದು ಕಮರ್ಷಿಯಲ್ ಟ್ಯಾಕ್ಸ್ ಡಿಪಾರ್ಟ್‌ಮೆಂಟಿನಲ್ಲಿ ಎ ಸಿ ಟಿ ಒ ಮತ್ತು ಸಿ ಟಿ ಒ ಆಗಿ ಕೆಲಸ ಮಾಡುತ್ತಾ ಇರುವವರಿಗೆ ಅವರು ಈ ಬಗ್ಗೆ ಅದೇ ತರಹ ಕೆಲಸ ಮಾಡುತ್ತಾ ಇರುವುದರಿಂದ ನ್ಯಾಯಾಧೀಶರಾಗಲು ಅದರಲ್ಲಿ ಅವಕಾಶ ಇಲ್ಲ. ಅದರ ಬಗ್ಗೆ ಏನು ಹೇಳುತ್ತೀರಾ?

ಶ್ರೀ ಎ. ಲಕ್ಷ್ಮೀಸಾಗರ್. — ಮಾನ್ಯ ಅಧ್ಯಕ್ಷರೇ, ಅವರು ನ್ಯಾಯಾಧೀಶರಾಗಲು ಅದಕ್ಕೇನೂ ನಿರ್ಬಂಧ ಇಲ್ಲ. ತಮಗೆ ಹೇಳಬೇಕಾದರೆ according to Karnataka Recruitment of Gazetted Probationers Appointment by Competative Examination Rule 1966 and the Cadre of Recruitment Rules of this Department ಪ್ರಕಾರ ಅವರು ಎ ಸಿ ಟಿ ಒ ಆಗಿರಲಿ ಅಥವಾ ಸಿ ಟಿ ಒ ಆಗಿರಲಿ, ಕೆ ಪಿ ಎಸ್ ಸಿ ಯವರು ಆರ್ಡರ್ ಕರೆದಾಗ ಪಾಸಿಕೊಂಡು ಆ ಪರೀಕ್ಷೆಗೆ ಕೂತುಕೊಂಡು ತೇರ್ಗಡೆಯಾದರೆ ಇದಕ್ಕೆ ಬರಬಹುದು.

Sub : Institutions under Wakf Board in Dharwad District

Question : 223 (284) Sri Gnandev Doddameti (Rona).— Will the Minister for Labour Wakf be pleased to state :—

a) The number of wakf institutions which have been registered under the wakf Act in Dharwad District and the number of wakf institutions which have received Government grant so far (Taluk-wise information to be furnished) ;

b) Which are the wakf institutions that have received financial assistance during 1983–84 in Dharwad District and the number of Mosques that have taken up the work of construction by using the Government grants.

c) The total amount of grants sanctioned in Dharwad District

Answer : Sri Aziz sait (Minister for Labour and Wakf).— 1043 Taluk-wise information is furnished as per the statement appended hereto. (Statement — see in page No. 217)

Two

(i) Anjuman-e-Islam, Dharwad

(ii) Anjuman-e-Islam, Hubli

However no grants have been sanction to the Mosques as such, during the year 1983–84 till now and the question of their taking up the works does not arise.

A total amount of Rs. 8,58,000/- begining from 1976-77 and up-to-date has been sanctioned.

ಶ್ರೀ ಜ್ಞಾನ್‌ದೇವ್ ದೊಡ್ಡಮೇಟಿ.— ಮಾನ್ಯ ಅಧ್ಯಕ್ಷರೇ, ತಾವು ಕೊಟ್ಟಿರತಕ್ಕಂಥ ಸಹಾಯ ಧನದಲ್ಲಿ ಎಷ್ಟು ಮಸೀದಿಗಳು ಆ ಹಣವನ್ನು ಉಪಯೋಗಿಸಿಕೊಂಡು ಕೆಲಸ ಮಾಡುತ್ತಿವೆ ಎನ್ನುವುದರ ಸಂಬ್ಧ ಏನಾದರೂ ಹೇಳುತ್ತೀರಾ?

ಶ್ರೀ ಅಜೀಜ್ ಸೇಠ್. — ಈ ಪ್ರಶ್ನೆಯ (ಅ)ಗೆ ಉತ್ತರವಾಗಿಯೇ ಹೇಳಿದ್ದೇನೆ. 1043 ಎಂದು ಮಾನ್ಯ ಸದಸ್ಯರಿಗೆ ಈ ಬಗ್ಗೆ ಏನಾದರೂ ವಿಷಯಗಳನ್ನು ಕೇಳಬೇಕು ಅಂತ ಮನಸ್ಸಿನಲ್ಲಿದ್ದರೆ ದಯವಿಟ್ಟು ಕೇಳಲಿ, ಉತ್ತರ ಕೊಡುತ್ತೇನೆ.

ಶ್ರೀ ಜ್ಞಾನದೇವ್ ದೊಡ್ಡಮೇಟಿ.— ನೀವು ತೆಗೆದುಕೊಂಡಿರತಕ್ಕಂಥಾ ಗ್ರಾಂಟ್‌ನಲ್ಲಿ ಅವರು ಪೂರ್ತಾ ಆ ಕಟ್ಟಡವನ್ನು ಕಟ್ಟಿದ್ದಾರೊ ಇಲ್ಲವೋ ಗೊತ್ತಿಲ್ಲ. ಯಾವುದಾದರೂ ಅಪೂರ್ಣವಾಗಿರುವ ಕಟ್ಟಡಗಳು ಏನಾದರೂ ಇವೆಯೇ ಅನ್ನುವುದನ್ನು ತಿಳಿಸುತ್ತೀರಾ?

ಶ್ರೀ ಅಜೀಜ್ ಸೇಠ್ —ನಾವು ಅವರಿಗೆ ಏನು ಗ್ರಾಂಟ್ ಕೊಡುತ್ತೇವೋ ಅದನ್ನು ಯುಟಿಲೈಸ್ ಸರಿಯಾದ ರೀತಿಯಲ್ಲಿ ಮಾಡಿದ್ದಾರೆ ಎಂದು ಒಂದು ಸರ್ಟಿಫಿಕೇಟ್ ತರಿಸಿಕೊಳ್ಳುತ್ತೇವೆ, ಜೊತೆಗೆ ಈ ಹಣವನ್ನು ಕೊಡಬೇಕಾದರೆ ಡೆಪ್ಯೂಟಿ ಕಮಿಷನರ ಮುಖಾಂತರ ಆ ಬಗ್ಗೆ ಪರದಿಯನ್ನು ತರಿಸಿಕೊಂಡು, ಹಣವನ್ನು ಕೊಡುತ್ತೇವೆ, ಆದುದರಿಂದ ಇದರ ಬಗ್ಗೆ ಏನೂ ಮಿಸ್‌ಅಪ್ರೋಪ್ರಿಯೇಷನ್ ಆಗುವುದಕ್ಕೆ ಕಾರಣವೇ ಇಲ್ಲ ಎಂದು ಹೇಳುತ್ತೇನೆ.

ಶ್ರೀ ಜ್ಞಾನದೇವ್ ದೊಡ್ಡಮೇಟಿ.— ಸ್ವಾಮಿ, ಗ್ರಾಮಾಂತರ ಪ್ರದೇಶಗಳಲ್ಲಿರುವ ಮಸೀದಿಗಳವರು ನಮಗೆ ಸಹಾಯ ಬೇಕು ಎಂದು ಈಗಾಗಲೇ ತಿಳಿಸಿದ್ದಾರೆ. ಅದಕ್ಕೆ ಏನಾದರೂ ಬೇರೆ ಒಂದು ಕಾನೂನು ಚೌಕಟ್ಟು ಇದೆಯೇ